ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 20–10–2016

# ಪತ್ರಿಕಾ ಆಮಂತ್ರಣ

1 ಪೊಲೀಸ್ ಸಂಸ್ಮರಣ ದಿನಾಚರಣೆ:

ಮುಖ್ಯ ಅತಿಥಿ: ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:

ಡಾ. ಜಿ. ಪರಮೇಶ್ವರ್, ಗೃಹ ಸಚಿವರು

ದಿನಾಂಕ: 21–10–2016, ಶುಕ್ರವಾರ ಬೆಳಿಗ್ಗೆ 7–30 ಗಂಟೆಗೆ.

ಸ್ಥಳ: ಕೋರಮಂಗಲ ಕೆ.ಎಸ್.ಆರ್.ಪಿ. 3ನೇ ಪಡೆಯ ಕವಾಯತು ಮೈದಾನ, ಬೆಂಗಳೂರು.

2. "ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ"

ಉದ್ಘಾಟನೆ: ಶ್ರೀಮತಿ ಉಮಾಶ್ರೀ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ದಿನಾಂಕ: 21–10–2016, ಶುಕ್ರವಾರ, ಬೆಳಿಗ್ಗೆ 10–00 ಗಂಟೆಗೆ.

ಸ್ಥಳ: ವಿಭಾಗೀಯ ಮಟ್ಟದ ಸ್ತ್ರೀಶಕ್ತಿ ತರಬೇತಿ ಕೇಂದ್ರ, ಮಡಿವಾಳ,

(ಸರ್ಕಾರಿ ವೀಕ್ಷಣಾಲಯ ಆವರಣ) ಬೆಂಗಳೂರು.

3. Department of Public Enterprises, Government of Karnataka PSUs

. MDs Conference:

Keynote Address: Shri Eshwara B Khandre
Minister of Public Enterprises and
Municipalities and Local Bodies

Date: 21-10-2016 Time: 10.00 a.m

Venue: Ball Room: 2 & 3, Ritz-Carlton, No. 99 Residency Road,
Bengaluru -560 025

## ಪತ್ರಿಕಾ ಪ್ರಕಟಣೆ

## ಮೌಖಿಕ ಸಂದರ್ಶನ

ಬೆಂಗಳೂರು ಅಕ್ಟೋಬರ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2016 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಕನ್ನಡ ಭಾಷಾ ವಿಷಯದ ಮೌಖಿಕ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ಪ್ರಕಟಿಸಿದೆ.

ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ಪಿ.ಡಬ್ಲ್ಯೂಡಿ ಸರ್ಕ್ಯೂಟ್ ಹೌಸ್, ಬೆಳಗಾವಿ ಹಾಗೂ ನ್ಯೂ–ಐವಾನ್–ಇ–ಪಾಹಿ ಅತಿಥಿ ಗೃಹ, ಕಲಬುರಗಿಯಲ್ಲಿ ಅಕ್ಟೋಬರ್ 28 ರಂದು ನಡೆಸಲಾಗುವುದು. ನವೆಂಬರ್ 2 ರಂದು ಪಿ.ಡಬ್ಲ್ಯೂಡಿ ಸರ್ಕ್ಯೂಟ್ ಹೌಸ್, ಶಿವಮೊಗ್ಗ, ಪಿ.ಡಬ್ಲ್ಯೂಡಿ. ಅತಿಥಿ ಗೃಹ, ಮೈಸೂರು ಹಾಗೂ ಬೆಂಗಳೂರಿನ ಕೆ.ಪಿ.ಎಸ್.ಸಿ. ಉದ್ಯೋಗ ಸೌಧದಲ್ಲಿ ಸಂದರ್ಶನ ನಡೆಯಲಿದೆ.

ಅರ್ಹ ಅಭ್ಯರ್ಥಿಗಳ ಸಂದರ್ಶನ ಸೂಚನಾ ಪತ್ರಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದ್ದು, ಸಂದರ್ಶನದ ಸೂಚನಾಪತ್ರಗಳನ್ನು ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಅಂಚೆ ಮೂಲಕ ರವಾನಿಸುವುದಿಲ್ಲ. ಅರ್ಹ ಅಭ್ಯರ್ಥಿಗಳು ತಮ್ಮ ನೋಂದಣಿ ಸಂಖ್ಯೆಗಳನ್ನು ನಮೂದಿಸಿ ಸಂದರ್ಶನ ಸೂಚನಾ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಸಂದರ್ಶನದ ವೇಳೆ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಸೂಚನಾ ಪತ್ರಗಳು ಲಭ್ಯವಾಗದ ಅರ್ಹ ಅಭ್ಯರ್ಥಿಗಳು ಅಕ್ಟೋಬರ್ 26 ರ ಒಳಗಾಗಿ ಆಯೋಗದ ಕೇಂದ್ರ ಕಚೇರಿಯನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080–30574944/30574945/30574957 ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## ಕರ್ನಾಟಕ ರಾಜ್ಯ ಚಲನಚಿತ್ರ ಸಾಹಿತ್ಯ ಪ್ರಶಸ್ತಿ ಪ್ರಕಟ

ಬೆಂಗಳೂರು ಅಕ್ಟೋಬರ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರದ 2014 ನೇ ಸಾಲಿನ ಕರ್ನಾಟಕ ರಾಜ್ಯ ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿಗೆ ಚಿತ್ರಲೋಕ ಡಾಟ್ ಕಾಂ ಪ್ರಕಟಿಸಿರುವ ಬರಹಗಾರ ಖ್ಯಾತ ಪತ್ರಕರ್ತ ಉದಯ ಮರಕಿಣಿ ಅವರ 'ಟಚ್ ಸ್ಕ್ರೀನ್ – ಮೂರು ದಶಕಗಳ ಸಿನಿಮಾ ಶಿಕಾರಿ' ಹಾಗೂ 2015 ನೇ ಸಾಲಿಗೆ  ಪ್ರೀತಿ ಪ್ರಕಾಶನ, ಬೆಂಗಳೂರು ಪ್ರಕಟಿಸಿರುವ ದೊಡ್ಡಹುಲ್ಲೂರು ರುಕ್ಕೋಜಿ ಅವರ 'ಡಾ. ರಾಜ್‌ಕುಮಾರ್ ಸಮಗ್ರ ಚರಿತ್ರೆ' ಪುಸ್ತಕಗಳು ಆಯ್ಕೆಯಾಗಿವೆ.

ಕನ್ನಡ ಚಲನಚಿತ್ರ ರಂಗದ ಬಗ್ಗೆ ಕನ್ನಡ ಭಾಷೆಯಲ್ಲಿ ಚಲನಚಿತ್ರ ಸಾಹಿತ್ಯದ ಕೊರತೆಯಿರುವುದನ್ನು ಮನಗೊಂಡು ಅದರ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಲು ಕರ್ನಾಟಕ ರಾಜ್ಯ ಚಲನಚಿತ್ರ ಸಾಹಿತ್ಯ ವಾರ್ಷಿಕ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.

ಪ್ರಶಸ್ತಿ ತಲಾ 20,000 ರೂ. ಗಳ ನಗದು ಮತ್ತು 50 ಗ್ರಾಂ ಬೆಳ್ಳಿ ಪದಕವನ್ನು ಲೇಖಕರು ಮತ್ತು ಪ್ರಕಾಶಕರಿಗೆ ನೀಡಿ ಗೌರವಿಸಲಾಗುವುದು ಎಂದು ಸಮಿತಿ ಅಧ್ಯಕ್ಷರಾದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಿತಿಯಲ್ಲಿ ಪತ್ರಕರ್ತೆ ಡಾ: ಯು.ಬಿ. ರಾಜಲಕ್ಷ್ಮಿ ಮತ್ತು ಪತ್ರಕರ್ತ ಚ.ಹ. ರಘುನಾಥ್ ಸಮಿತಿಯ ಸದಸ್ಯರಾಗಿದ್ದರು.

## ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿ

**ಬೆಂಗಳೂರು ಅಕ್ಟೋಬರ್ 20  (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ 2015 ನೇ ಸಾಲಿನ ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ಕಲಾವಿದ ಸತೀಶ್ ನಿರ್ದೇಶಿಸಿ ಮತ್ತು ನಿರ್ಮಾಣ ಮಾಡಿರುವ 'ಚೌಕಾಬಾರ'  ಆಯ್ಕೆಯಾಗಿದೆ.

ಪ್ರಶಸ್ತಿಯು 50,000 ರೂ.ಗಳ ನಗದು ಬಹುಮಾನ ಒಳಗೊಂಡಿರುತ್ತದೆ.  ಈ ಪ್ರಶಸ್ತಿ ಆಯ್ಕೆಗೆ ಖ್ಯಾತ ಕಿರುಚಿತ್ರ ನಿರ್ದೇಶಕಿ ಹಾಗೂ ಪತ್ರಕರ್ತೆ ರೇಖಾರಾಣಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು.  ಪತ್ರಕರ್ತ ಬಾ.ನಾ ಸುಬ್ರಮಣ್ಯ ಸದಸ್ಯರಾಗಿದ್ದು, ಜಂಟಿ ನಿರ್ದೇಶಕರು (ಚಲನಚಿತ್ರ) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದರು.

# ಯುವರಾಜ ಕಾಲೇಜು ಪ್ರಾಂಶುಪಾಲರ ಅಮಾನತ್ತು

ಬೆಂಗಳೂರು ಅಕ್ಟೋಬರ್ 20 (ಕರ್ನಾಟಕ ವಾರ್ತೆ)

ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ನೇಮಕಾತಿ ಪ್ರಕ್ರಿಯೆ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ನಂಜೇಗೌಡ ಅವರನ್ನು ಅಮಾನತ್ತಿನಲ್ಲಿರಿಸಿ ಸರ್ಕಾರ ಆದೇಶ ಹೊರಡಿಸಿದೆ.

## ಪ್ರೊ. ರಾಜಣ್ಣ ಮೈಸೂರು ವಿವಿ ಕುಲಸಚಿವ (ಆಡಳಿತ)

ಬೆಂಗಳೂರು ಅಕ್ಟೋಬರ್ 20 (ಕರ್ನಾಟಕ ವಾರ್ತೆ)

ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ನೇಮಕಾತಿ ಅಕ್ರಮ ಪ್ರಕರಣಕ್ಕೆ ಕುಲಸಚಿವ (ಆಡಳಿತ) ಡಾ: ಸಿ. ಬಸವರಾಜು ಅವರ ಅಮಾನತಿನಿಂದ ತೆರವಾದ ಹುದ್ದೆಗೆ, ಕುಲಸಚಿವರು (ಮೌಲ್ಯಮಾಪನ) ಪ್ರೊ. ರಾಜಣ್ಣ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

# ಅವಧಿ ವಿಸ್ತರಣೆ

ಬೆಂಗಳೂರು ಅಕ್ಟೋಬರ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ 2016-17 ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶಿಲ್ಪಕಲಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಪರಿಣಿತರಿಗೆ ಫೆಲೋಶಿಫ್ ನೀಡಲು ಅರ್ಜಿ ಆಹ್ವಾನಿಸಿರುವ ಅವಧಿಯನ್ನು 19-11-2016 ರವರೆಗೆ ವಿಸ್ತರಿಸಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳ ಅಭ್ಯರ್ಥಿಗಳು ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಉಚಿತವಾಗಿ ಅರ್ಜಿಗಳನ್ನು ಮತ್ತು ಮಾಹಿತಿಯನ್ನು ಪಡೆಯಬಹುದಾಗಿದೆ.